ದಿನಾಂಕಃ 19.07.2024 ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆ : 3 ನೇ ಎದುರುದಾರರ ಪರ : ಶ್ರೀಮತಿ ಜಿ ಎಂ ವಿ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಸಂಗತಿಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ. ಪ್ರಮಾಣಪತ್ರದಲ್ಲಿನ ಸಂಗತಿಗಳನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ದಿಃ 11.07.2023 ರಂದು ನಮ್ಮ ಸಂಸ್ಥೆಯಿಂದ ಶಾಲಿನಿ ಎಂಬಬವವರು ಸಾಕ್ಷ್ಯ ನುಡಿದಿದ್ದು, ಅವರ ಮೂಲಕ ನಿ ಆರ್ 1 ರಿಂದ 3 ಗುರುತಿಸಿದ್ದು, ಸದರಿ ದಾಖಲಾತಿಗಳ ಪೈಕಿ ನಿ ಆರ್ 2 ಮತ್ತು 3 ಅನ್ನು ನನ್ನ ಮೂಲಕ ಗುರುತಿಸಿರುವುದಾಗಿ ಪರಿಗಣಿಸಬೇಕಾಗಿ ಕೋರುತ್ತೇನೆ. (ಸದರಿ ಕೋರಿಕೆಯ  ಪ್ರಕಾರ ನಿ ಆರ್ 2 ಮತ್ತು 3 ಅನ್ನು ಈ ಸಾಕ್ಷಿಯ ಮೂಲಕ ಗುರುತಿಸಿರುವುದಕಾಗಿ ಪರಿಗಣಿಸಲಾಗಿದೆ). ನನಗೆ ನೀಡಿರುವ ಅಧಿಕಾರ ಪತ್ರವನ್ನು ಎಂ ವಿ ಸಿ 707/2019 ರಲ್ಲಿ ಗುರುತಿಸಲಾಗಿದೆ.

ಪಾಟೀ ಸವಾಲು : ಅರ್ಜಿದಾರರ ಪರ : ಶ್ರೀ ಬಿ ಪಿ ಡಿ ಪರ ಶ್ರೀ  ಎಂ ಬಿ ಆರ್ ವಕೀಲರಿಂದಃ

ಇಂಟರ್ ನಲ್ ಇನ್ವೇಸ್ಟಿಗೇಷನ್ ಮಾಡಲು ನೀವು ಜನರನ್ನು ಇಟ್ಟು ಕೊಂಡಿದ್ದೀರಾ ಎಂದರೆ ಸಾಕ್ಷಿ ಕೇವಲ ಪೊಲೀಸ್ ದಾಖಲಾತಿಗಳನ್ನು ಪಡೆಯಲು ಕೆಲವರನ್ನು ನೇಮ ಕ ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಲಾರಿ ಚಾಲಕನ ಡಿಎಲ್ ಬಗ್ಗೆ ನಾವು ಆರ್ ಟಿ ಒ ಕಚೇರಿಯಲ್ಲಿ ನಾವು verification ಮಾಡಿಸಿರುವುದಿಲ್ಲ, ಸಾಕ್ಷಿ ಪೊಲೀಸ್ ದಾಖಲಾತಿಯಲ್ಲೇ ಸ್ಪಷ್ಟವಾಗಿದೆ ಎಂದು ನುಡಿಯುತ್ತಾರೆ. ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸಾಕ್ಷಿ ಅದು contributory negligence ಇಂದ ಆಗಿದ್ದು, ಮೃತರು ರಾಂಗ್ ಸೈಡ್ ನಲ್ಲಿ ಬರುತ್ತಿದ್ದರು ಎಂದು ನುಡಿಯುತ್ತಾರೆ.

ನಾನು ಅಪಘಾತವನ್ನು ಖುದ್ದು ನೋಡಿಲ್ಲ, ಸ್ಕೆಚ್ ಮತ್ತು ದಾಖಲೆಯ ಆಧಾರದ ಮೇಲೆ ಸಾಕ್ಷ್ಯ ನುಡಿಯುತ್ತಿದ್ದೇನೆ. Pay and recovery ಕಾನೂನಿನ ಬಗ್ಗೆ ಅರಿವು ಇದೆ ಎಂದರೆ ಸಾಕ್ಷಿ ಅದು ಈ ಕೇಸ್ ಗೆ ಅನ್ವಯಿಸುವುದಿಲ್ಲ ಎಂದು ನುಡಿಯುತ್ತಾರೆ. ಪರಿಹಾರ ಕೊಡಬಾರದು ಎಂಬ ದುರುದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೇ ಸ ಇ ಒ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಶ್ರೀರಂಗಪಟ್ಟಣ.